# ಮಿಮಿ ಹೊಂದಿಕೊಂಡಳು











ಕೆಲವು ದಿನಗಳಾದ ನಂತರ, ತನ್ನ ಹೊಸ ಮನೆಗೆ ಮಿಮಿ ನಿಧಾನವಾಗಿ ಹೊಂದಿಕೊಂಡಳು.ಈಗ ಅವಳಿಗೆ ಯಾವ ಕೋಣೆಯಲ್ಲಿ ಆಹಾರ ಸೇವಿಸುವುದು, ಎಲ್ಲಿ ಮಲಗುವುದು ಎಲ್ಲಿ ಶಾಲಾಕೊಠಡಿ ಎಂದು ಮನೆಯ ಎಲ್ಲಾ ಕೋಣೆಗಳೂ ಗೊತ್ತಾದವು. ಮೊದಲಿಗೆ ಅವಳು ನಾಚಿಕೆ ಮತ್ತು ಭಯವನ್ನು ಹೊಂದಿದ್ದಳು ಆದರೆ ಕೂಡಲೇ ಇತರರ ಆಟಗಳಲ್ಲಿ ಸೇರಿಕೊಂಡಳು.

ಅವಳು ನಾನೂನೊಂದಿಗೆ "ಹಿಡಿಯುವ" ಆಟ: ಕಿಕಿ, ಶೇರೂ ಹಾಗೂ ಬೋಬೋರೊಂದಿಗೆ ಕಣ್ಣಾಮುಚ್ಚಾಲೆ; ಹಾಗೂ ಮೋಂಟಿ ಮತ್ತು ಬಂಟಿಯೊಂದಿಗೆ ಓಟದ ಆಟ ಆಡಿದಳು.

ಮಾವಿನ ಕಾಯಿ ಇನ್ನೂ ಮಾಗಿಲ್ಲದಿದ್ದಾಗಲೂ, ಮಾವು ಹಣ್ಣಾಗಲು ಬಿಡಿರೆಂದು ಮಿಸೆಸ್. ಡೀರ್ ಅವರನ್ನು ಕೇಳಿಕೊಳ್ಳುತ್ತಿದ್ದರೂ ಕೂಡಾ ಮೋಮೋನೊಂದಿಗೆ ಮಾವಿನ ಮರವನ್ನು ಹತ್ತಿ ಕಾಯಿ ಕೀಳಲು ಅವಳಿಗೆ ತುಂಬಾ ಇಷ್ಟ.





ಆದರೆ ಟಿಂಗು, ಎಂಬ ಒಳ್ಳೆಯ ಜಿಂಕೆ, ಮಿಮಿಯ ಉತ್ತಮ ಸ್ನೇಹಿತೆ.
ಟಿಂಗು ಜೊತೆಗೂಡಿ ಮಣಿ ನೆಕ್ಲೇಸ್ ಮಾಡುವುದು ಹಾಗೂ ಚಿತ್ರಗಳಿಗೆ ಬಣ್ಣ ಹಾಕುವುದೆಂದರೆ ಮಿಮಿಗೆ ಬಹಳ ಇಷ್ಟ. ಅವಳು ಯಾವಾಗಲೂ ಊಟದ ಸಮಯದಲ್ಲಿ ಟಿಂಗು ಪಕ್ಕವೇ ಕೂರುತ್ತಿದ್ದಳು.






ಪ್ರತೀ ಮುಂಜಾನೆ, ಎಲ್ಲಾ ಪ್ರಾಣಿಗಳೂ ಬೆಳಗಿನ ಉಪಹಾರ ಹಾಗೂ ಸ್ನಾನ ಮುಗಿಸಿದ ನಂತರ, ತಮ್ಮ ಶಾಲಾ ಕೊಠಡಿಗಳಿಗೆ ಹೋಗುತ್ತಿದ್ದರು.ಇದು ಮಿಮಿಗೆ ದಿನದ ಬಹಳ ಮೆಚ್ಚಿನ ಸಮಯವಾಗಿತ್ತು.ಅವರು ತಮ್ಮ ದಿನದ ಎಲ್ಲಾ ವೇಳೆಯನ್ನೂ ತಮ್ಮ ತುಂಬಾ ಜಾಣೆ ಹಾಗೂ ಬುದ್ಧಿವಂತ ಗುರು ಮಿಸ್ ಜಂಬೋನೊಂದಿಗೆ ಕಳೆಯುತ್ತಿದ್ದರು.




ಮಿಮಿಗೆ ಮಿಸ್ ಜಂಬೋರ ಪಾಠದ ಕೋಣೆಯಲ್ಲಿರುವುದೆಂದರೆ ಬಹಳ ಇಷ್ಟ.
ಮಿಸ್ ಜಂಬೋ ಪ್ರಾಣಿಗಳಿಗೆ ಕಾಡಿನಲ್ಲಿರುವ ಮರಗಳು ಹಾಗೂ ಹೂವುಗಳ ಬಗ್ಗೆ ಹಾಗೂ ಲೆಕ್ಕ ಹಾಕುವುದು ಮತ್ತು ಬಣ್ಣಹಾಕುವುದನ್ನು ತಿಳಿಸುತ್ತಿದ್ದರು....









....ಹಾಗೂ ಹತ್ತಿರದ ಬೆಟ್ಟಗಳಲ್ಲಿರುವ ಇತರ ಪ್ರಾಣಿಗಳ ಕುರಿತು ತಿಳಿಸುತ್ತಿದ್ದರು.
ಅವರು ಮಕ್ಕಳೊಂದಿಗೆ ಹಾಡುಗಳನ್ನು ಹಾಡುತ್ತಿದ್ದರು, ಹಾಗೂ ಕಥೆಗಳನ್ನು ಹೇಳುತ್ತಿದ್ದರು.
ಮಕ್ಕಳು ಸದೃಡ ಹಾಗೂ ಆರೋಗ್ಯವಂತರಾಗಿರಲು ಪ್ರತೀ ಬೆಳಿಗ್ಗೆ ಹೇಗೆ ವ್ಯಾಯಾಮಗಳನ್ನು ಮಾಡಬೇಕೆಂದು ಅವರು ತೋರಿಸಿಕೊಟ್ಟರು.





ಅವರು ಯಾರನ್ನೂ ಹೊಡೆಯುವುದು ಹಾಗೂ ಅವರನ್ನು ಬೈಯ್ಯುವುದು ಮಾಡುತ್ತಿರಲಿಲ್ಲ, ಶೇರೂ ಒಂದು ಆಟಿಗೆಯನ್ನು ಮುರಿದಾಗ ಅಥವಾ ಮೋಮೋ ಬಣ್ಣವನ್ನು ನೆಲದ ಮೇಲೆ ಚೆಲ್ಲಿದಾಗಲೂ ಅವರು ಬೈಯ್ಯಲಿಲ್ಲ, ಇದು ಅವರ ಒಳ್ಳೆಯ ಗುಣವಾಗಿದೆ.

"ಅಚಾತುರ್ಯಗಳು ಆಗುತ್ತವೆ." "ಶೇರೂ ಗೊಂಬೆಯನ್ನು ಕೈತಪ್ಪಿ ಮುರಿದ..ನಾವು ಮೋಮೋಗೆ ನೆಲವನ್ನು ಸ್ವಚ್ಛಗೊಳಿಸಲು ಸಹಾಯ ಮಾಡೋಣ."ಎಂದು ಮಿಸ್ ಜಂಬೋ ಹೇಳುತ್ತಿದ್ದರು.





ಮಿಮಿ ಹೆಚ್ಚಾಗಿ ಹೋಗುತ್ತಿದ್ದ ಇನ್ನೊಂದು ಸ್ಥಳವೆಂದರೆ ಅದು ಅಡುಗೆ ಕೋಣೆ.

ಅವಳು ತನ್ನ ತಾಯಿ ಮಾಡುವ ಕೆಲಸವನ್ನು ನೋಡುತ್ತಿದ್ದಂತೆಯೇ, ಮಿಸೆಸ್ ಜಿಂಕೆ/ಡೀರ್ ಅಡುಗೆ ಮಾಡುವುದನ್ನು ನೋಡಲು ಇಷ್ಟಪಡುತ್ತಿದ್ದಳು...ಏಕೆಂದರೆ ಅವಳ ಅಮ್ಮ ಆಡುತ್ತಿದ್ದ ಹಾಡನ್ನೇ ಮಿಸೆಸ್ ಜಿಂಕೆ/ಡೀರ್ ಹಾಡುತ್ತಿದ್ದಳು.ಅವಳು ಕೆಲವೊಮ್ಮೆ ಮಿಸೆಸ್ ಜಿಂಕೆ/ಡಿಯರ್‌ಗೆ ಪ್ಲೇಟ್ ಮತ್ತು ಪಾತ್ರೆಗಳನ್ನು ಜೋಡಿಸಲೂ ಸಹಾಯ ಮಾಡುತ್ತಿದ್ದಳು.







ತನ್ನ ಹೊಸ ಮನೆಯಲ್ಲಿ ಮಿಮಿ ಬಹಳ ಇಷ್ಟ ಪಟ್ಟ ಇನ್ನೊಂದು ವಿಷಯವೆಂದರೆ ಅದು ಹೊರಗಿನ ಆಟದ ಜಾಗ. ಪ್ರತೀ ಸಂಜೆಯೂ ಎಲ್ಲಾ ಪ್ರಾಣಿಗಳೂ ಹೊರಗೆ ಹೋಗಿ ಜೋಕಾಲಿ, ಸೀ-ಸಾ ಹಾಗೂ ಸ್ಲೈಡ್ಗಳಲ್ಲಿ ಆಡುತ್ತಿದ್ದರು. ಕೆಲವು ಸಲ ಬೋಬೋ ಮತ್ತು ಶೇರೂ ಜೋಕಾಲಿಗಾಗಿ ಜಗಳವಾಡುತ್ತಿದ್ದರು ಆದರೆ ಜೋಕಾಲಿ ಮತ್ತು ಜಾರುಬಂಡೆಯಲ್ಲಿ ಆಡಲು ಎಲ್ಲರೂ ಕಾದುಕೊಂಡಿದ್ದು ಸರದಿ ಪ್ರಕಾರ ಆಡಬೇಕೆಂದು ಮಿಸೆಸ್. ಕರಡಿ/ಬೇರ್ ಅವರಿಗೆ ನೆನಪಿಸುತ್ತಿದ್ದರು.



"ನನಗೆ ನನ್ನ ಮನೆಯಲ್ಲಿ ಶಾಲಾ ಕೊಠಡಿಯಿದ್ದಿರಲೇ ಇಲ್ಲ...ನಾನು ನನ್ನ ಮನೆಯನ್ನು ನೆನಪಿಸಿಕೊಂಡರೂ, ನಾನು ಜೋಕಾಲಿಯಲ್ಲಿ ಎಲ್ಲರೊಂದಿಗೆ ಆಡಲು ಇಷ್ಟಪಡುತ್ತೇನೆ."ಎಂದು ಮಿಮಿ ಮಿಸೆಸ್ ಕರಡಿ/ಬೇರ್ಗೆ ಹೇಳಿದಳು.





"ನಾವೆಲ್ಲರೂ ಒಂದು ದೊಡ್ಡ ಕುಟುಂಬದಂತೆ ಒಟ್ಟಿಗೆ ವಾಸಿಸುತ್ತಿದ್ದೇವೆ....ಹಾಗೂ ನೀನು ನಮ್ಮೊಂದಿಗೆ ಸಂತೋಷವಾಗಿರಬೇಕೆಂದು ನಾವು ಬಯಸುತ್ತೇವೆ, ನೀನು ಇಲ್ಲಿ ಸಂತೋಷವಾಗಿದ್ದೀಯೆಂದು ಕೇಳಿ ನನಗೆ ಸಂತೋಷವಾಯಿತು."ಮಿಸೆಸ್ ಕರಡಿ/ ಬೇರ್ ಹೇಳಿದಳು.

ಸಮುದಾಯ ಮಕ್ಕಳ ಮತ್ತು ಹದಿಹರೆಯದವರ ಮಾನಸಿಕ ಆರೋಗ್ಯ ಸೇವೆಗಳ
ಯೋಜನೆ,
ಮಕ್ಕಳ ಮತ್ತು ಹದಿಹರೆಯದವರ ಮನೋವೈದ್ಯಶಾಸ್ತ್ರ ಇಲಾಖೆ,
ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ರಾಷ್ಟ್ರೀಯ ಸಂಸ್ಥೆ (ನಿಮ್ಹಾನ್ಸ್)
(ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆ)
ಹೊಸೂರು ರಸ್ತೆ,  ಬೆಂಗಳೂರು–560029
**Website:www.nimhans.ac.in**
**Email :capnimhans@gmail.com**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರದ ನೆರವಿನೊಂದಿಗೆ

ವಿನ್ಯಾಸ ಮತ್ತು ಕಲೆ: ಸತೀಶ್ ರಾಮ್